

ಅಧಿಕಾರಿ: ನೋಡಿ ರಾಯರೆ, ಆಫೀಸನ್ನು ದೇವಸ್ಥಾನ ಅಂತ ಭಾವಿಸಿಕೊಂಡು ಕೆಲಸ ಮಾಡಬೇಕು.

ರಾಯರು: ಸರಿ ಸಾರ್, ಯಾರಾದರೂ ದಕ್ಷಿಣೆ ಕೊಟ್ಟರೆ ಸ್ವೀಕರಿಸಬಹುದಾ?

★★★

ನಂಜ: ಅಪ್ಪಾ ಏನೂ ಕೆಲಸ ಮಾಡದೆ ದುಡಿಮೆ ಮಾಡೋ ಉದ್ಯೋಗ ಯಾವುದಾದ್ರೂ ಇದ್ರೆ ಹೇಳಪ್ಪ.

ಮಂಜ: ನಂಗೊತ್ತಿಲ್ಲ ಮಗನೇ, ಕೆಲಸವನ್ನೇ ಮಾಡದೆ ಹಣ ಸಿಗೋಕೆ ಹೇಗೆ ಸಾಧ್ಯ?

ನಂಜ: ಹಾಗಲ್ಲಪ್ಪ. ನನಗೆ ಕೆಲಸ ಇರಬಾರದು. ಬೇರೆಯವರೆಲ್ಲಾ ಅವರವರ ಕೆಲಸ ಮಾಡಿಕೊಂಡು ಹೋಗ್ತಾ ಇರಬೇಕು. ನಮಗೆ ಹಣ ಬರ್ತಾ ಇರಬೇಕು.

ಮಂಜ: ಹಾಗಿದ್ದರೆ ಒಂದು ಸಾರ್ವಜನಿಕ ಶೌಚಾಲಯ ಶುರು ಮಾಡು!

**(ಸಂಗ್ರಹ) ವಿ.ಹೇಮಂತಕುಮಾರ, ಬೆಂಗಳೂರು**

---

ಗಂಡ: ಯಾಕೋ ನಿದ್ದೇನೆ ಬರ್ತಾ ಇಲ್ಲ ಕಣೆ.

ಹೆಂಡತಿ: ಹಾಗಾದ್ರೆ ಹೋಗಿ ಪಾತ್ರೆಗಳನ್ನು ತೊಳೆಯಿರಿ.

ಗಂಡ: ನಿಜ ಅನ್ಸಂಡ್ಯಾ! ನಾನು ನಿದ್ದೇಲಿ ಮಾತನಾಡುತ್ತಾ ಇರೋದು!

★★★

ಹುಡುಗ: ನಿಮ್ಮ ಮಗಳನ್ನು ನನಗೆ ಕೊಡ್ತೀರಾ?

ಹುಡುಗಿ ತಾಯಿ: ಇಲ್ಲ ಅವಳೀಗ ಓದುತ್ತಿದ್ದಾಳೆ.

ಹುಡುಗ: ಸರಿ ಹಾಗಾದರೆ ನಾಳೆ ಬರ್ತೇನೆ.

★★★

ಗಿರೀಶ್: ನಿನಗೆ ಗೊತ್ತಾ ನಾನು ನೀರಿನಲ್ಲಿ ಒಂದು ತಿಂಗಳಿದ್ದೆ.

ಹರೀಶ್: ನೀರಿನಲ್ಲಿ ಒಂದು ತಿಂಗಳಲ್ಲ ಒಂದು ದಿನ ಕೂಡಾ ಇರಲು ಸಾಧ್ಯವಿಲ್ಲ.

ಗಿರೀಶ್: ನಾನು ಇದ್ದದ್ದು ಹಡಗಿನಲ್ಲಿ.

★★★

ಯಮ: ನೀನು ಸಿಡಿಲು ಬಡಿದು ಸತ್ತೆ, ಆದರೆ..

ಸತ್ತವ: ಆದರೆ ಏನು ಪ್ರಭು?

ಯಮ: ಸಾಯುವ ಮುನ್ನ ನೀನು ನಗುತ್ತಿದ್ದೆ ಯಾಕೆ?

ಸತ್ತವ: ಸಿಡಿಲಿಗೂ ಮೊದಲು ಮಿಂಚು ಬಂತು. ಯಾರೋ ಫೋಟೋ ತೆಗೀತಿದ್ದಾರೆ ಎಂದು ಸ್ಮೈಲ್ ಕೊಟ್ಟೆ ಪ್ರಭು.

**(ಸಂಗ್ರಹ) ಕುಬೇರಪ್ಪ ಎಂ.ವಿಭೂತಿ, ಹರಿಹರ**

---

ಪುಟ್ಟ ಮಗು ತುಂಬಾ ಹಠ ಮಾಡುತ್ತಿತ್ತು– ರೈನ್ ಕೋಟ್ ಬೇಕೆಂದು. ಅಪ್ಪ ರೈನ್ ಕೋಟ್ ತಂದು ಕೊಟ್ಟ. ಮತ್ತೆ ಮರುದಿನ ಮಗು ಹಠ ಹಿಡಿಯಿತು. ಮಳೆ ಬರುತ್ತಿಲ್ಲ ಎಂದು!

★★★

ಗುಂಡ: ನಿಮ್ಮ ಮನೇಲಿ ರಿಮೋಟ್ ಕಂಟ್ರೋಲ್ ಇಲ್ವಾ?

ಮಂಟಾ: ಎರಡುಂಟು. ಒಂದು ಕಾರಿನದು, ಮತ್ತೊಂದು ನನ್ನ ಮಾವ ಧಾರೆ ಎರೆದು ಕೊಟ್ಟದ್ದು!

★★★

ಪೊಲೀಸ್ ಕಾನ್‌ಸ್ಟೇಬಲ್‌ನನ್ನು ನಾಯಿ ಕಚ್ಚಿತು. ಡಾಕ್ಟರ್ ಬಳಿ ಹೋಗಿ ಚಿಕಿತ್ಸೆ ಪಡೆದ.

ಡಾಕ್ಟರ್: ಪೊಲೀಸ್ ಕಾನ್‌ಸ್ಟೇಬಲ್ ಅಂತ ಹೇಳ್ತೀಯಾ, ಬೊಗಳೋ ನಾಯಿ ಕಚ್ಚೋದಿಲ್ಲ, ಕಚ್ಚೋ ನಾಯಿ ಬೊಗಳೋದಿಲ್ಲ. ಅಷ್ಟೂ ಕಾಮನ್ ಸೆನ್ಸ್ ನಿನಗಿಲ್ವಾ?

ಕಾನ್‌ಸ್ಟೇಬಲ್: ಆ ನಾಯಿ ಕಚ್ಚೋದಕ್ಕೆ ಬಂದಾಗ ನಾನು ಯೂನಿಫಾರ್ಮ್‌ನಲ್ಲಿರಲಿಲ್ಲ.

★★★

ಗುಂಡ: ಸಾರ್, ನನ್ನ ಕಣ್ಣು ನೋಯುತ್ತಿದೆ. ಎರಡು ದಿನ ರಜಾ ಬೇಕು.

ಆಫೀಸರ್: ಅದಕ್ಕೆ ಎರಡು ದಿನ ರಜೆ ಏಕೆ ಬೇಕು?

ಗುಂಡ: ಸಾರ್, ಎರಡೂ ಕಣ್ಣುಗಳು ನೋಯುತ್ತಿವೆ.

★★★

ಡಾಕ್ಟರೊಬ್ಬರು ಹೊಸದಾಗಿ ಷಾಪ್ ತೆಗೆದರು. ಹಲವು ದಿವಸಗಳಾದರೂ ಯಾವ ರೋಗಿಯೂ ಬರಲಿಲ್ಲ. ಸ್ನೇಹಿತರೊಬ್ಬರ ಬಳಿ ಯಾಕಿರಬಹುದೆಂದು ವಿಚಾರಿಸಿದರು. ಆತ ಹೇಳಿದ 'ಬೋರ್ಡಿನಲ್ಲಿ ನಿನ್ನ ಹೆಸರು ಡಾ. ವೈಕುಂಠಯ್ಯ ಎಂದಿದೆ. ಅದನ್ನು ಬದಲಿಸಿ ಚಿರಂಜೀವಯ್ಯ ಎಂದಿಡು.

**(ಸಂಗ್ರಹ) ಸುಜಾತಾ ನಾರಾಯಣಗೌಡ**

---


ಸಮಸ್ಯೆ ನಿಮ್ಮದು ಪರಿಹಾರ ನಮ್ಮದು

ದಕ್ಷಿಣ ಭಾರತದ ಜನರಲ್ಲಿ ಪ್ರಶಂಸೆಗಳಿಸಿರುವ ವಶೀಕರಣ ಮಾಂತ್ರಿಕರು

ಶ್ರೀಯುತ ಪರಶುರಾಮ್ ಗುರೂಜಿ



ಶ್ರೀ ಸಾಯಿಬಾಬ ಉಪಾಸಕರು

ಸ್ತ್ರೀ ಪುರುಷ ವಶೀಕರಣ, ಸತಿಪತಿ ಕಲಹ, ಡೈವೋರ್ಸ್ ಪ್ರಾಬ್ಲಮ್, ಸಾಲಬಾಧೆ, ಪ್ರೇಮವಿಚಾರ, ಸಂತಾನಫಲ, ಇನ್ನಿತರ ನಿಮ್ಮ ಸಮಸ್ಯೆ ಏನೇ ಇರಲಿ ಎಷ್ಟೇ ಕಠಿಣವಾಗಿರಲಿ ಈಗಿನ ಕಾಲದಲ್ಲೂ ಜೀವಂತವಾಗಿರುವಂತಹ ಕೇರಳದ ಕೆಲವು ಪ್ರಾಚೀನ ವಿಸ್ಮಯ ವಿದ್ಯೆಗಳಿಂದ

ಕೇವಲ 5 ದಿನದಲ್ಲಿ

100% ಪರಿಹಾರ ಶತಸಿದ್ಧ

ಇಲ್ಲಿ ಹೇಳುವ ವಿಷಯವನ್ನು ಗುಪ್ತವಾಗಿಡಲಾಗುವುದು ಹಾಗೂ ಗುರೂಜಿಯವರಲ್ಲಿ ನಿಸ್ಸಂಕೋಚದಿಂದ ಮಾತನಾಡಲು ಕರೆಮಾಡಿ:

ಜೈಬಾಲಾಜಿ ಜ್ಯೋತಿಷ್ಯಂ ಬನಶಂಕರಿ ಮುಖ್ಯಬಸ್‌ನಿಲ್ದಾಣದ ಪಕ್ಕದಲ್ಲಿ. ಬೆಂಗಳೂರು. 9620444460